ದಿನಾಂಕಃ 21-10-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎನ್.ಆರ್. ಬಿ ವಕೀಲರಿಂದಃ**

**26.** ನಾನು ನನ್ನ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದುವರೆದ ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಅದರಲ್ಲಿರುವ ವಿಷಯಗಳು ಸತ್ಯವಾಗಿದ್ದು, ಅವುಗಳನ್ನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ.

**27.** OS 6/2006(77/2004) order sheet ನ ದೃಢಿಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-6 ಎಂದು , ಆ ದಾವೆಯ ವಾದ ಪತ್ರದ ದೃಢಿಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-7 ಎಂದು , ಆ ದಾವೆಯಲ್ಲಿ ಆ ದಾವೆಯ 3 ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದಿ ಪತ್ರದ ದೃಢಿಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-8 ಎಂದು, ಆ ದಾವೆಯಲ್ಲಿ 1 ನೇ ಪ್ರತಿವಾದಿ ಸಲ್ಲಿಸಿದ ಹೆಚ್ಚುವರಿ ಪ್ರತಿವಾದಿ ಪತರದ ದೃಢಿಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-9 ಎಂದು, ಆ ದಾವೆಯಲ್ಲಿ ಪ್ರತಿವಾದಿ 2 ರಿಂದ 5 ರವರು ಸಲ್ಲಿಸಿದ memo ದೃಢಿಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-10 ಎಂದು, ಆ ದಾವೆಯಲ್ಲಿ ರಚಿಸಿದ ವಿವಾದಾಂಶಗಳ ದೃಢಿಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-11 ಎಂದು, ಆ ದಾವೆಯಲ್ಲಿ ಆ ದಾವೆಯ ವಾದಿಯ ಸಾಕ್ಷ್ಯದ ದೃಢಿಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-12 ಎಂದು, ಆ ದಾವೆಯಲ್ಲಿ ಸಲ್ಲಿಸಿದ ರಾಜಿ ಅರ್ಜಿಯ ದೃಢಿಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-13 ಎಂದು, ಆ ದಾವೆಯಲ್ಲಿ ಹಾಜರು ಪಡಿಸಿದ ದಿನಾಂಕಃ 09-08-1996 ರ ಸ್ಥಾವರ ಜಂಗಮಾಸ್ತಿಗಳ ಹಿಸ್ಸೆ -ವಾಂಟಣೆ ಕರಾರು ಪತ್ರದ ದೃಢಿಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ಪುರಾವೆಗೊಳಪಡಿಸುವ ಜವಾಬ್ದಾರಿಯೊಂದಿಗೆ ಹಾಗೂ ಸ್ಟಾಂಪ್ ಡ್ಯೂಟಿ ಕಡಿಮೆ ಇದ್ದಲ್ಲಿ ಪಾವತಿಸುವ ಶರತ್ತುಕ್ಕನುಗುಣವಾಗಿ ನಿಪಿ-14 ಎಂದು ಗುರುತಿಸಲಾಯಿತು .

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಮ್.ಪಿ.ಬಿ ವಕೀಲರಿಂದಃ**

**28**. ನನ್ನ ತಂದೆ ಮೃತ ಪಡುವ ಸಮಯದಲ್ಲಿ ನನಗೆ 2 ವರ್ಷ ವಯಸ್ಸು ಹಾಗೂ 1 ನೇ ಪ್ರತಿವಾದಿಗೆ 8 ತಿಂಗಳು ವಯಸ್ಸಾಗಿತ್ತು. ನಾನು ಹಾಗೂ ಪ್ರತಿವಾದಿಗಳು ಕುಟುಂಬದ ಆಸ್ತಿಯಲ್ಲಿ ಭಾಗ ಮಾಡಿಕೊಂಡಿಲ್ಲ. ನನ್ನ ತಂದೆ ಹಾಗೂ ಅವರ ಸಹೋದರರು ಹಾಗುಾ ಅಜ್ಜನ ನಡುವೆ ಕಾರವಾರ ನ್ಯಾಯಾಲಯದಲ್ಲಿ ಸಲ್ಲಿಸಿದ ವಾಂಟಣಿ ದಾವೆ ಬಿಟ್ಟು ಬೇರೆ ದಾವೆ ನಾವು ನನ್ನ ತಂದೆ ನಂತರ ಸಲ್ಲಿಸಿಲ್ಲ. ದಾವಾ ಸ್ವತ್ತಿನ ಆದಾಯ ಬಿಟ್ಟು 1 ನೇ ಪ್ರತಿವಾದಿಗೆ ಬೇರೆ ಆದಾಯ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಪ್ರತಿವಾದಿಯ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.